ಶ್ರೀ ಮಲ್ಲಾರಗೌಡ ಪಾಟೀಲ್.—ಸುಮ್ಮನೆ ಪರಿಶೀಲನೆ ಮಾಡುತ್ತೇವೆಂದರೆ ಆಗುವುದಿಲ್ಲ. ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕು.

(ix) ವಿಷಯ : ಹರಿಜನ ಯುವತಿಯ ನಿಗೂಢ ಸಾವಿನ ಬಗ್ಗೆ.

ಶ್ರೀ ಧನಂಜಯ ಕುಮಾರ್ (ಮಂಗಳೂರು).— ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲ್ಲೂಕಿನ ಕಾಪೂರು ಎಂಬಲ್ಲಿ ದಿನಾಂಕ 21-1-84 ರಂದು ಸುಮಿತ್ರ ಎಂಬ ಹರಿಜನ ಯುವತಿ ನಿಗೂಢ ರೀತಿಯಲ್ಲಿ ಮೃತಪಟ್ಟಿದ್ದಾಳೆ. ಈ ಯುವತಿ 21ನೇ ತಾರೀಖು ಸಂಜೆ 7 ಗಂಟೆಯಿಂದ ನಾಪತ್ತೆಯಾಗಿದ್ದಳು. ಮರುದಿವಸ ಈಕೆಯ ಮೃತ ದೇಹ ದೇವದಾಸ್ ಮಾಣಿಯವರ ಮನೆಯ ಬಾವಿಯಲ್ಲಿ ತೇಲುತ್ತಿದ್ದು ಮೇಲೆತ್ತಿ ನೋಡಿದಾಗ ದೇಹದ ಮೇಲೆ ಅಲ್ಲಲ್ಲಿ ಗಾಯ ಇದ್ದು ಸೀರೆ ಮತ್ತು ಕುಪ್ಪಸ ಹರಿದಿದ್ದು ಕಂಡುಬರುತ್ತದೆ. ಇದರಿಂದಾಗಿ ಆಕೆಯ ಮೇಲೆ ಬಲಾತ್ಕಾರದಿಂದ ಅತ್ಯಾಚಾರ ನಡೆದಿದೆ ಎಂಬ ಸಂಶಯ ಇದೆ. ದೇವದಾಸ್ ಮಾಣಿ ಎಂಬುವವರು ರಾಜಕೀಯದಲ್ಲಿ ಪ್ರಭಾವಿ ವ್ಯಕ್ತಿಗಳಾಗಿದ್ದಾರೆ. ಆದ್ದರಿಂದ ಈ ಪ್ರಕರಣದಲ್ಲಿ ನಿಷ್ಪಕ್ಷಪಾತವಾದ ತನಿಖೆ ನಡೆಯುತ್ತಿಲ್ಲ ಎಂಬ ಸಂಶಯ ಇದೆ. ಹರಿಜನ ಬಂಧುಗಳೆಲ್ಲಾ ಗಾಬರಿಯಾಗಿದ್ದಾರೆ. ಈ ವಿಚಾರದಲ್ಲಿ ಆ ಜನರು ಸೇರವಣಿಗೆ ಮಾಡಿ ತಮ್ಮ ಅತೃಪ್ತಿಯನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಗಂಭೀರವಾದ ಪ್ರಶ್ನೆಯಾಗಿರುವುದರಿಂದ ತಕ್ಷಣ ಈ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಬೇಕು. ನಿಷ್ಪಕ್ಷಪಾತವಾದ ತನಿಖೆ ನಡೆದು ನ್ಯಾಯ ದೊರಕಿಸಿಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಮೇಶ್ ಜಿಗಜಿನಗಿ (ಮಾನ್ಯ ಗೃಹ ಖಾತೆ ರಾಜ್ಯ ಸಚಿವರು).— ಈ ಕೇಸಿನಲ್ಲಿ ಕೊಲೆಯಾಗಿದೆ ಎಂಬ ಸಂಶಯದ ಮೇಲೆ ಮಾನ್ಯ ಸದಸ್ಯರು ಹೇಳಿದ ಹಾಗೆ ಸಿ.ಓ.ಡಿ. ತನಿಖೆ ಮಾಡಿಸುತ್ತೇವೆ.

ಡಾ. ವಿ. ಎಸ್. ಆಚಾರ್ಯ.— ಕೊಲೆಯಾಗಿರುವುದು ಸಂಶಯವಲ್ಲ, ಸಂಶಯಾತ್ಮಕವಾಗಿ ಕೊಲೆಯಾಗಿದೆ.

(x) ವಿಷಯ : ಕುಮಟಾ ತಾಲ್ಲೂಕಿನ ಅರಣ್ಯದಲ್ಲಿ ಅಕ್ರಮವಾಗಿ ಮರಗಳನ್ನು ಕಡಿಯುತ್ತಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೆ, ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಕತಗಾಲ ರೇಂಜಿನಲ್ಲಿ ಅಕ್ಕೋಡು ಲಾಗಿಂಗ್ ಏರಿಯಾ ಬ್ಲಾಕ್ ನಂ. 429-27-28 ರಲ್ಲಿ 88 ಮರಗಳನ್ನು ಕಡಿಯಬೇಕು ಎಂದು ಗುರುತು ಮಾಡಲಾಗಿತ್ತು ಆದರೆ ಅಲ್ಲಿ 200ಕ್ಕೂ ಹೆಚ್ಚು ಮರಗಳನ್ನು ಈಗಾಗಲೇ ಕಡಿದಿದ್ದಾರೆ ಎಂಬ ಮಾಹಿತಿ ಅಲ್ಲಿನ ಸಾರ್ವಜನಿಕರಿಂದ ದೊರೆತಿದೆ ಅದಲ್ಲದೆ ಇನ್ನೂ ಕೆಲವು ಸ್ಥಳಗಳಲ್ಲಿ ಗುರುತಿಸಿದ್ದಕ್ಕಿಂತ ಹೆಚ್ಚಿನ ಮರಗಳನ್ನು ಕಡಿಯುವ ಕೆಲಸ ನಡೆಯುತ್ತಿದೆ. ಇದರಲ್ಲಿ ಗುತ್ತಿಗೆದಾರರು ಮತ್ತು ಅರಣ್ಯ ಖಾತೆ ಅಧಿಕಾರಿಗಳು ಶಾಮೀಲಾಗಿದ್ದಾರೋ ಹೇಗೆ ಎಂಬುದು ಗೊತ್ತಾಗಬೇಕಾಗಿದೆ. ಆ ರೀತಿ ಆಗಿದ್ದರೆ ಏನಾದರೂ ಕ್ರಮ ಕೈಗೊಳ್ಳತ್ತಾರೋ ಹೇಗೆ ಎಂಬುದನ್ನು ಮಾನ್ಯ ಅರಣ್ಯ ಮಂತ್ರಿಗಳು ಹೇಳಬೇಕು. ಆ ರೀತಿ ಆಗಿದ್ದರೆ ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಇಲ್ಲದಿದ್ದರೆ ಇದು ಬೇರೊಂದು ರೀತಿಯ ಕಳ್ಳಸಾಗಾಣಿಕೆಯಾಗುತ್ತದೆ. ನಾನು ಬಹಳ ಸಾರಿ ಈ ಸದನದಲ್ಲಿ ಹೇಳಿದ್ದೇನೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಅರಣ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು. ಈಗ ನಾನು ಈ ವಿಷಯವನ್ನು ಮತ್ತೊಮ್ಮೆ ಸರ್ಕಾರದ ಗಮನಕ್ಕೆ ತರಬಯಸುತ್ತಾ ಈ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳತ್ತೇನೆ.

ಶ್ರೀ ಬಿ. ಎ. ಜೀವಿಜಯ(ಅರಣ್ಯ ಮಂತ್ರಿಗಳು).—ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಮಾಹಿತಿ ಸಂಗ್ರಹಿಸಿ ಸ್ಟೇಟ್‌ಮೆಂಟ್ ಕೊಡುತ್ತೇನೆ.

(xi) ವಿಷಯ : ಸರಕು ಖರೀದಿ ಇಲಾಖೆಯವರು ಪಾಲಿಥೀನ್ ಚೀಲಗಳ ಬಗ್ಗೆ ಕರೆದಿರುವ ಟೆಂಡರ್ ಪುನರ್ವಿಮರ್ಶೆ ಮಾಡುವ ವಿಚಾರ

ಶ್ರೀ ಎಂ. ಪುಟ್ಟಸ್ವಾಮಿ ಗೌಡ.— ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರದ ಸರಕು ಖರೀದಿ ಇಲಾಖೆ ನಿರ್ದೇಶಕರು ಇತ್ತೀಚೆಗೆ ಪಾಥಿಲೀನ್ ಚೀಲಗಳ ಟೆಂಡರ್ ಕರೆದಿದ್ದಾರೆ. ಆದರೆ ಅದಕ್ಕೆ ಹಾಕಬೇಕಾದ ಅರ್ಜಿಯ ಬೆಲೆ 15 ಸಾವಿರ ರೂಪಾಯಿ ನಿಗದಿ ಮಾಡಿದ್ದಾರೆ. ಇದರ ಜೊತೆಗೆ ಪ್ರತ್ಯೇಕವಾಗಿ ಮಾರಾಟ ದರಪಟ್ಟಿಯನ್ನೂ ನಿಗದಿ ಮಾಡಿದ್ದಾರೆ. ಅರ್ಜಿಗೆ ಕೊಡಬೇಕಾದ ಹಣವನ್ನು ವಾಪಸ್ ಕೊಡುವುದಿಲ್ಲ ಎಂದೂ ಹೇಳಿದ್ದಾರೆ. ಈ ಮೊದಲು ಅರ್ಜಿಗೆ ಕೇವಲ 100 ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದು ಈಗ ಏಕಾಏಕಿ 15 ಸಾವಿರ ರೂಪಾಯಿಗಳಿಗೆ ಏರಿಸಿರುವುದರ ಹಿಂದೆ ದೊಡ್ಡ ಕೈಗಾರಿಕೋದ್ಯಮಿಗಳ ಕೈವಾಡ ಇದೆ ಎಂಬ ಶಂಕೆ ಉಂಟಾಗುತ್ತಿದೆ. ಇದರಿಂದ ಸಣ್ಣ ಕೈಗಾರಿಕೋದ್ಯಮಿಗಳ ಮೇಲೆ ತೀವ್ರತರವಾದ ಆಘಾತವಾಗುತ್ತಿದೆ. ಟೆಂಡರ್ ಹಾಕುವ ಕೊನೆಯ ತಾರೀಖು ಈ ತಿಂಗಳ 20 ನೇ ತಾರೀಖಿರುವುದರಿಂದ ಈ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಂಡು, ಪುನರ್‌ವಿಮರ್ಶೆ ಮಾಡಿ ಮೊದಲಿನಂತೆ ಅರ್ಜಿಯ ಬೆಲೆಯನ್ನು 100 ರೂಪಾಯಿಗೆ ನಿಗದಿ ಮಾಡಬೇಕು. ಅಲ್ಲಿಯವರೆಗೆ ಟೆಂಡರ್